# ಹೊಯ್ಸಳ ವಿನಯಾದಿತ್ಯನ ಮಹಾಪ್ರಧಾನಿ ಸನ್ಧಿವಿಗ್ರಹಿ–(ಚಾವುಣ್ಡರಾಯ ಬಸದಿಯ ನಿರ್ಮಾತೃ)

*** ಡಾ.ಮಂಜುನಾಥ ಸಕಲೇಶ್, ಇತಿಹಾಸ ಸಹ ಪ್ರಾಧ್ಯಾಪಕರು, ಸರ್.ಎಂ.ವಿ.ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಭದ್ರಾವತಿ**

ಕ್ರಿ.ಶ.೧೦ನೇ ಶತಮಾನದಲ್ಲಿ ಗಂಗ ಅರಸರಾದ ಇಮ್ಮಡಿ ಮಾರಸಿಂಹನಿಗೂ, ನಾಲ್ವಡಿ ರಾಚಮಲ್ಲನಿಗೂ ಮಂತ್ರಿಯಾಗಿದ್ದ ಚಾವುಂಡರಾಯನು ಗೊಮ್ಮಟೇಶನ ಬೃಹತ್ ವಿಗ್ರಹವನ್ನು ಸ್ಥಾಪಿಸಿದನು. ಸ್ವಾಮಿನಿಷ್ಠೆಗೆ ಹೆಸರಾದ ಇವನು ವಜ್ಜಳ, ನೊಳಂಬ, ರಣಸಿಂಗರಾಜ ಮುಂತಾದವರ ವಿರುದ್ಧ ಯುದ್ಧ ಹೂಡಿ ಶೂರ ಸೇನಾನಿಯೆಂದು ವರ್ಣಿತನಾಗಿದ್ದಾನೆ. ಇವನ ಚಾವುಂಡರಾಯ ಪುರಾಣದಿಂದ ಈತನು ಜಯಿಸಿದ ರಾಜರ ಪಟ್ಟಿಯೇ ಸಿಗುತ್ತದೆ.

ನೃಪಕಾಮನ ಕೋಟೆಯೊಳ್ ರಾಜನೆಂಬಧಟನುಮಂ ಬಾಸನೆಂಬ ಕಚೆಯನುಮಂ ಸಿವರನೆಂಬ ಜಟ್ಟಿಗನುಮಂ ಕೂಣಾಂಕನೆಂಬ ಕಟ್ಟುಗೊಡನುಮಂ ಪೊಯಿಸಳನೆಂಬ ಬಿರುದನುಮಂ ಪೃಥುವನೆಂಬ ಬಿರುದನುಮಂ ಬಿಹನೆಂಬ ಕಲಿಗಳುಮಂ ಬಲ್ಲಾಳ್ಗಳುಮವೊಂದೆ ಮ್ಮೆಯೊಳ್ ಪೆಣೆದಿರಿದು ಗೆಲ್ದ ಭುಜವಿಕ್ರಮನುಂ.(೧)

ಇದರಲ್ಲಿ ನೃಪಕಾಮನ ಕೋಟೆಯ ಉಲ್ಲೇಖವಿದೆ. ಪೊಯಿಸಳ ಎಂಬುವನ ಹೆಸರು ಸಹ ಬಂದಿದೆ. ಅಂದರೆ ಚಾವುಂಡರಾಯನ ಕಾಲಕ್ಕಾಗಲೇ ಹೊಯಿಸಳರು ಅಂದಿನ ರಾಜಕೀಯ ಇತಿಹಾಸದಲ್ಲಿ ಬೆಳಕಿಗೆ ಬಂದಿದ್ದರು. ಅಲ್ಲದೆ ಕೋಟೆಯನ್ನು ಕಟ್ಟಿಕೊಂಡು ಬಲಯುತರಾಗಿದ್ದರು. ಇಲ್ಲಿ ಹೆಸರಿಸಲಾದ ವೀರರು ನೃಪಕಾಮನ ಕೋಟೆಯಲ್ಲಿ ಚಾವುಂಡರಾಯನ ವಿರುದ್ಧ ಕಾದಾಡಬೇಕಾದರೆ ಹೊಯ್ಸಳರ ಕಡೆಯವರಾಗಿರಬೇಕು. ಒಟ್ಟಾರೆ ಹೊಯ್ಸಳರು ಗಂಗರ ವೈರಿಗಳಾಗಿ ಕಾಣಿಸಿಕೊಳ್ಳುತ್ತಾರೆ. ಹೀಗಿರುವಾಗ ಚಾವುಂಡರಾಯನು ಪೊಯ್ಸಳನ ಮಹಾಪ್ರಧಾನಿ ಮತ್ತು ಸನ್ಧಿವಿಗ್ರಹಿಯಾಗಲು ಸಾಧ್ಯವೇ ಇಲ್ಲ. ಆದರೆ ಹುಲ್ಲೂರು ಶ್ರೀನಿವಾಸ ಜೋಯಿಸರು ಈ ಆಕ್ಷೇಪವನ್ನು ನಿವಾರಿಸಲು ಗಂಗ ಮಂಡಳಿಕರ ಬಳಿ ಮಂತ್ರಿ ಮತ್ತು ಸಂಧಿವಿಗ್ರಹಿಯಾಗಿದ್ದ ಚಾವುಂಡರಾಯನು ಪೊಯ್ಸಳನಲ್ಲಿಯೂ ಮಹಾಪ್ರಧಾನಿ, ಸಂಧಿವಿಗ್ರಹಿಯಾಗಿದ್ದನೆಂದು ಕುರುಡಿಹಳ್ಳಿ (ಕುರಾದಹಳ್ಳಿ) ಮತ್ತು ಚಾವುಂಡರಾಯ ಬಸದಿಯ ಶಾಸನವನ್ನು(೨) ಉಲ್ಲೇಖಿಸುವ ಮೂಲಕ ನಿರ್ಧರಿಸುವ ಪ್ರಯತ್ನ ಮಾಡಿದ್ದಾರೆ. ಆದರೆ ೧೦ ಮತ್ತು ೧೧ ನೇ ಶತಮಾನದಲ್ಲಿ ಆದ ಕನ್ನಡ ಲಿಪಿಯ ಬೆಳವಣಿಗೆಯನ್ನು ಗಮನಿಸಿದಾಗ ಹಾಗೂ ಕುರಾದಹಳ್ಳಿಯಲ್ಲಿಯೆ ಇರುವ ಚಾವುಣ್ಡರಾಯನನ್ನು ಉಲ್ಲೇಖಿಸುವ ಎರಡು ಶಾಸನಗಳನ್ನು ಮತ್ತು ಗೊಮ್ಮಟಶಿಲ್ಪದ ಶಾಸನಗಳನ್ನು ಅಧ್ಯಯನ ಮಾಡಿದಾಗ ಇಬ್ಬರು ಚಾವುಂಡರಾಯರಿರುವುದು ಸ್ಪಷ್ಟವಾಗುತ್ತದೆ.

೧೦ನೇ ಶತಮಾನದ ೨೭೨, ೨೭೩ ಮತ್ತು ೨೭೬ನೆಯ ಶಾಸನಗಳು ಬಾಹುಬಲಿಮೂರ್ತಿಯನ್ನು ಚಾಮುಣ್ಡ ರಾಜಂ ಮಾಡಿಸಿದಂ ಎಂದು ಹೇಳುತ್ತವೆ. ಆದರೆ ಚಿಕ್ಕಬೆಟ್ಟದ ಮೇಲಿರುವ ಚಾವುಂಡರಾಯ ಬಸದಿಯನ್ನು ಸಹ ಈತನೇ ಕಟ್ಟಿಸಿದನೆಂಬ ಸಾಮಾನ್ಯ ಅಭಿಪ್ರಾಯವನ್ನು ಒಪ್ಪಲಾಗದು. ಏಕೆಂದರೆ ಈ ಬಸದಿಯ ಮುಂಭಾಗದ ಜಗತಿಯ ಉಭಯ ಪಾರ್ಶ್ವಗಳ ಗೋಡೆಯ ಕೆಳಗಣ ದಿಂಡಿನ ಮೇಲಿರುವ ಶಾಸನ **ಶ್ರೀ ಚಾಮುಣ್ಡರಾಜ ಮಾಡಿಸಿದಂ** ಎಂಬುದನ್ನು ೧೦ನೇ ಶತಮಾನಕ್ಕೆ ಸೇರಿಸಲಾಗದು. ಈ ಶಾಸನದ ಲಿಪಿ ಅವುಗಳಿಗಿಂತ ನಂತರದ ಕಾಲದ್ದು. ೧೧ನೇ ಶತಮಾನಕ್ಕೆ ಸೇರಿದ್ದು. ಇದೇ ಬಸದಿಯ ಪಾರ್ಶ್ವತೀರ್ಥಂಕರನ ವಿಗ್ರಹದ ಪೀಠದ ಮೇಲಿನ ೧೫೦ನೆಯ ಶಾಸನದಿಂದ ಬೆಳ್ಗೊಳದಲ್ಲಿ ಚಾವುಂಡರಾಜನ ಮಗನಾದ ಜಿನದೇವಣ್ಣನು ಜಿನಗೃಹವನ್ನು ಕಟ್ಟಿದ ವಿಷಯ ಬಂದಿದ್ದು ಇದೂ ಸಹ ೧೧ನೇ ಶತಮಾನಕ್ಕೆ ಸೇರಿದ್ದು ಎಪಿಗ್ರಾಫಿಯ ಕರ್ನಾಟಿಕದಲ್ಲಿ ದಾಖಲಾಗಿದೆ.(೩) ಲಿಪಿಯ ಅಧ್ಯಯನಕ್ಕಾಗಿ ಮೂರು ಶಾಸನಗಳನ್ನು ಇಲ್ಲಿ ಕೊಡಲಾಗಿದ್ದು, ಕಾಲಮಾನದ ಪ್ರಕಾರ ಇಬ್ಬರು ಚಾವುಂಡರಾಯರು ಕಂಡು ಬರುತ್ತಾರೆ. ಇದಕ್ಕೆ ಸಹಕಾರಿಯಾಗಿ ಕುರಾದಹಳ್ಳಿಯ ಶಾಸನವನ್ನು ಉಲ್ಲೇಖಿಸಬಹುದು.

**(ಕುರಾದಹಳ್ಳಿ – ಕಲ್ಲೇಶ್ವರ ದೇವಾಲಯದ ಮುಂದೆ ನೆಟ್ಟಿರುವ ಕಲ್ಲು)(೪)**

'...... ಶ್ರೀ ಮತ್ತ್ರಿಭುವನಮಲ್ಲ ವಿನೆಯಾದಿತ್ಯ ಪೊಯ್ಸಳ ದೇವರು ಗಂಗವಾಡಿತೊಂಭತ್ತರುಸಾಸಿರಮಂ ಸುಖಸಂಕಥಾ ವಿನೋದದಿಂ ನಾಳುತ್ತಮಿರೆ॥ ತತ್ಪಾದಪದ್ಮೋಪ ಜೀವಿ ಶ್ರೀ ಮತ್ವೆರ್ಗ್ಗಡೆ ಚಾವುಣ್ಡರಾಯನಾಸಂದಿನಾಡೊಳಗಣ ದೇಸವಣಿಯ ನಾಳುತ್ತಮಿರೆ॥

**(ಕುರಾದಹಳ್ಳಿ – ಗ್ರಾಮಕ್ಕೆ ಸೇರಿದ ಗುಡ್ಡದಲ್ಲಿ ಹುಟ್ಟು ಬಂಡೆಯೊಂದರ ಮೇಲೆ)**[೫]

ಸ್ವಸ್ತಿ ಶ್ರೀಮತು ಮಹಾಮಣ್ಡಳೇಶ್ವರ ಪೊಯ್ಸಳನ ಮಹಾಪ್ರಧಾನಿ ಸನ್ದಿವಿಗ್ರಹಿ ಚಾವುಣ್ಡರಾಜನಪುತ್ರ ಮಾದಿರಾಜನು ಜಿನದೇವನು ದಣ್ಡನಾಯಕರ್ತ್ತೆಯ್ಲಪಯ್ಯನು ಅಂತು ತಮುತ ಮುವರು ದೇಸವಾಣಿನಾರ್ದ ರಾಯಗಟ್ಟ ಒಳಗಾಗಿ ಕೆರೆಯು ದೇಗಲಮುವ ಮಾಡಿಸಿದ ದ್ವಿಜಕುಳತಿಳಕ॥

ಮೇಲಿನ ಎರಡನೆಯ ಶಾಸನವನ್ನು ಮಾತ್ರ ಗಮನಿಸಿದ ಜೋಯಿಸರು ಶಾಸನಾಂಶವನ್ನು ಮಾತ್ರ ಅನುಸರಿಸಿ ಪೊಯ್ಸಳನಲ್ಲಿ ಚಾವುಣ್ಡರಾಜನು ಮಹಾಪ್ರಧಾನಿ ಮತ್ತು ಸನ್ದಿವಿಗ್ರಹಿಯಾಗಿದ್ದನೆಂದು ಹೇಳಿದ್ದಾರೆ. ಆದರೆ ಇದೇ ಹಳ್ಳಿಯ ಇನ್ನೊಂದು ಶಾಸನದಲ್ಲಿ ವಿನಯಾದಿತ್ಯ ಗಂಗವಾಡಿ ೯೬೦೦೦ವನ್ನು ಅಳುತ್ತಿರುವಾಗ ಆತನ ಪೆರ್ಗಡೆ ಚಾವುಣ್ಡರಾಯ ಆಸಂದಿನಾಡಿನ ದೇಶವಣೆ ಆಳುತ್ತಿರುವ ವಿಷಯ ಬಂದಿದೆ. ಒಂದೇ ಹಳ್ಳಿಯ ೧೧ನೇ ಶತಮಾನದ ೨ ಶಾಸನಗಳಲ್ಲಿ ಉಲ್ಲೇಖಿತ ಚಾವುಣ್ಡರಾಯ/ರಾಜ ಅಭಿನ್ನರಾಗಿದ್ದಾರೆ. ವಿನಯಾದಿತ್ಯನ ಕಾಲದಲ್ಲಿ ಪೆರ್ಗಡೆ ಚಾವುಣ್ಡರಾಯ ದೇಶವಣೆ ಆಳುತ್ತಿದ್ದು, (ಮುಂದೆ) ಅವನೇ ಹೊಯ್ಸಳರ ಮಹಾಪ್ರಧಾನಿ ಮತ್ತು ಸಂಧಿವಿಗ್ರಹಿಯಾಗಿ ನಿಯುಕ್ತಿಯಾಗಿದ್ದುದನ್ನು ಎರಡೂ ಶಾಸನಗಳ ಸಹಾಯದಿಂದ ರೇಖಿಸಬಹುದು.

ಬಂಡೆ ಶಾಸನದಲ್ಲಿ ಬಂದಿರುವ ಕೆರೆ ಮತ್ತು ದೇಗುಲ ಕಟ್ಟಿಸಿದ ಚಾವುಣ್ಡರಾಯನ ಪುತ್ರ ಜಿನದೇವನೆ ಬೆಳ್ಗೊಳದ ಜನರೆಲ್ಲ ಹೊಗಳುವಂತೆ ದ್ವಿತಳ ಬಸದಿಯನ್ನು ಮತ್ತು ಅಲ್ಲಿಯ ಪಾರ್ಶ್ವನಾಥ ಶಿಲ್ಪವನ್ನು ಮಾಡಿಸಿದ್ದಾನೆಂದು ತಿಳಿಯುತ್ತದೆ. ಜಿನದೇವನು ಅಜಿತಸೇನಮುನಿಗಳ ಶಿಷ್ಯನೆಂದು ಮಾಹಿತಿಯಾಗಿ ಬಂದಿದೆ. ರನ್ನ, ನಾಲ್ಕನೇ ರಾಚಮಲ್ಲ, ಇಮ್ಮಡಿ ಮಾರಸಿಂಹ ಮತ್ತು ಚಾವುಂಡರಾಯರಿಗೆ ಗುರುವಾಗಿದ್ದ ಅಜಿತಸೇನರು ಹೊಯ್ಸಳ ವಿನಯಾದಿತ್ಯನ ಕಾಲದಲ್ಲೂ ಬದುಕಿದ್ದು, ಬಹುಶಃ ವಯೋವೃದ್ಧರಾಗಿದ್ದು ಜಿನದೇವಣನ ಗುರುವೂ ಆಗಿದ್ದನು ಎನ್ನುವುದು ಸ್ಪಷ್ಟವಾಗುತ್ತದೆ.

**(ಶ್ರವಣಬೆಳಗೊಳ ಚಾವುಂಡರಾಯ ಬಸದಿಯ ಮೇಲಣ ಪಾರ್ಶ್ವತೀರ್ಥಂಕರ ಪಾದ ಪೀಠದಲ್ಲಿ)**[೬]

ಜಿನಗೃಹಮಂ ಬೆಳ್ಗೊಳದೊಳ್ಜನಮೆಲ್ಲಂ ಪೊಗಳೆ ಮನ್ತ್ರಿ ಚಾಮುಣ್ಡನ ನನ್ದನನೊಲವಿಂ ಮಾಡಿಸಿದಂ ಜಿನದೇವಣನ ಜಿತಸೇನ ಮುನಿಪರ ಗುಡ್ಡಂ

ಈ ಶಾಸನದಿಂದ ಕುರಾದಹಳ್ಳಿಯಲ್ಲಿ ಬಂದಿರುವ ವಿನಯಾದಿತ್ಯನ ಮಹಾಪ್ರಧಾನಿ ಸನ್ಧಿವಿಗ್ರಹಿ ಚಾವುಂಡರಾಯ ಮತ್ತು ಆತನ ಮಗ ಜಿನದೇವ(ಣ)ರೇ ಶ್ರವಣಬೆಳಗೊಳದಲ್ಲಿ ಕಾಣಿಸಿಕೊಂಡಿದ್ದು ಚಾವುಂಡರಾಯ ಬಸದಿಯ ನಿರ್ಮಾತೃಗಳ ಬಗ್ಗೆ ಹೊಸಬೆಳಕು ಚೆಲ್ಲುತ್ತದೆ. ಇದರಿಂದ ಸಾಂಪ್ರದಾಯಿಕವಾಗಿ ನಂಬಿರುವ ಗೊಮ್ಮಟಶಿಲ್ಪ ಸ್ಥಾಪಿಸಿದ ಚಾವುಂಡರಾಯನೇ ಬೇರೆ, ಚಾವುಂಡರಾಯ ಬಸದಿಯನ್ನು ನಿರ್ಮಿಸಿದ ಚಾವುಂಡರಾಯನೇ ಬೇರೆ ಎಂಬುದು ಸ್ಪಷ್ಟವಾಗುತ್ತದೆ. ಈ ಎರಡನೆಯ ಚಾವುಂಡರಾಯನೇ ೧೧ನೇ ಶತಮಾನದಲ್ಲಿ ಮಹಾಮಂಡಳೇಶ್ವರ ಪೊಯ್ಸಳ ವಿನಯಾದಿತ್ಯನ ಕಾಲದಲ್ಲಿ ದೇಶವಣಿ ಆಳುತ್ತಿದ್ದು, ಮಹಾಪ್ರಧಾನಿ ಸನ್ಧಿವಿಗ್ರಹಿಯೂ ಆಗಿದ್ದವನು.

**ಅಡಿಟಿಪ್ಪಣಿಗಳು :**

೧ ‘ಚಾವುಂಡರಾಯ ವಿರಚಿತ ಚಾವುಂಡರಾಯ ಪುರಾಣಂ’ ಪುಟ ೪೩೬.
(ಸಂಪಾದಕರು: ಕಮಲಾ ಹಂಪನಾ, ಕೆ.ಆರ್. ಶೇಷಗಿರಿ)

೨. ಎ. ಕ – ೧೦, ಅರಸೀಕೆರೆ – ೨೫೫, ೧೧ನೇ ಶತಮಾನ
ಎ. ಕ – ೨, ಶ್ರವಣಬೆಳ್ಗೊಳ – ೧೫೦. ೧೧ನೇ ಶತಮಾನ

೩. ಎ. ಕ – ೨, ಪೀಠಿಕೆ. ಪುಟ ೪

೪. ಎ. ಕ – ೧೦, ಅರಸೀಕೆರೆ – ೨೫೪, ೧೧ನೇ ಶತಮಾನ

೫. ಎ. ಕ – ೧೦, ಅರಸೀಕೆರೆ – ೨೫೫, ೧೧ನೇ ಶತಮಾನ

೬. ಎ. ಕ – ೨, ಶ್ರವಣಬೆಳ್ಗೊಳ – ೧೫೦, ೧೧ನೇ ಶತಮಾನ